# ಅರಿವು ಸಾಮಾನ್ಯವೆ?

ವಿಜ್ಞಾನವು ಭೌತಪ್ರಪಂಚದ ವಿವರಗಳನ್ನು ನಮಗೆ ಒದಗಿಸುತ್ತದೆಂಬುದು ನಿಜವಷ್ಟೆ? ನೀರು, ಗಾಳಿ, ಬೆಂಕಿ ಮುಂತಾದ ಭೌತ ವಸ್ತುಗಳು ನಮ್ಮ ದಿನಬಳಕೆಯ ಸಾಮಗ್ರಿಗಳು ಮಾತ್ರ ಆಗಿವೆ. ಇವುಗಳನ್ನು ಪ್ರಾಚೀನರು ಪಂಚಭೂತಗಳೆಂದು ಕರೆದರು. ಈ ಪಂಚಭೂತಗಳಿಂದ ಪಂಚೀಕರಣತತ್ವವು ವಿಶಾಲವಾಗಿ ಬೆಳೆಯಿತು. ಚರ್ಮಚಕ್ಷುವಿನ ಮೂಲಕ ಬಾಹ್ಯದ ಸಂಗತಿಗಳನ್ನು ನಾವು ಗಮನಿಸುತ್ತೇವೆ. ಅಲ್ಲಿ ಪ್ರಕೃತಿಯ ವಿಸ್ಮಯವನ್ನೂ ಕಾಣುತ್ತೇವೆ. ಶಬ್ದಲೋಕದ ನಾನಾಬಗೆಯ ಧ್ವನಿವಿನ್ಯಾಸಗಳನ್ನು ಕೇಳುತ್ತೇವೆ. ಹಲವು ಬಗೆಯ ಪರಿಮಳಗಳನ್ನು ಆಘ್ರಾಣಿಸುತ್ತೇವೆ. ನಾನಾ ಬಗೆಯ ಸ್ಪರ್ಶ ಸುಖಗಳನ್ನೂ ಅನುಭವಿಸುತ್ತೇವೆ ಮತ್ತು  ನಾಲಗೆಯು ಷಡ್‌ರಸಗಳನ್ನು ಆಸ್ವಾದಿಸುತ್ತದೆ. ಹೀಗೆ ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ಚರ್ಮ ಇವುಗಳ ಮೂಲಕ ಮಿತಿಯಾದ ನೆಲೆಯಲ್ಲಿ ಭೌತಲೋಕದ ವಸ್ತು ಪ್ರಪಂಚವನ್ನು ನಾವು ಅರಿಯುತ್ತ ಬಂದಿದ್ದೇವೆ. ಸಾಮಾನ್ಯವಾಗಿ ಮನುಷ್ಯ ಕರ್ಮೇಂದ್ರಿಯ ಹಾಗೂ ಜ್ಞಾನೇಂದ್ರಿಯಗಳ ಮೂಲಕ ಲೋಕದ ಪರಿವೇಷವನ್ನು ಮನಗಾಣುತ್ತಾನೆ. ಅದೇ ರೀತಿ ನೀರು, ಬೆಂಕಿ, ಗಾಳಿ ಮುಂತಾದ ಪರಿಸರದ ವಸ್ತುಗಳು ಮನುಷ್ಯನ ಇಂದ್ರಿಯಗ್ರಾಹ್ಯಕ್ಕೆ ಒಳಪಡುತ್ತವೆ. ವಿಜ್ಞಾನವು ಇವುಗಳನ್ನು ವಿಶ್ಲೇಷಿಸುತ್ತದೆ. ನೀರಿನ ಉಪಯೋಗವನ್ನು ವಿಜ್ಞಾನವು ಹಲವು ಬಗೆಗಳಲ್ಲಿ ತಿಳಿಸಿಕೊಡುತ್ತದೆ. ಅದೇ ರೀತಿ, ಬೆಂಕಿ, ಗಾಳಿ ಇವುಗಳ ಉಪಯೋಗದ ಕ್ರಮಗಳನ್ನು ವಿಜ್ಞಾನ ನಮಗೆ ಮನವರಿಕೆ ಮಾಡಿಕೊಡುತ್ತದೆ.

ಆದರೆ, ವಿಜ್ಞಾನ ಎಲ್ಲಿ ನಿಲ್ಲುತ್ತದೋ ಅಲ್ಲಿಂದ ಅಧ್ಯಾತ್ಮ ಮುಂದುವರಿಯುತ್ತದೆ. ಭಾರತೀಯ ವಿಜ್ಞಾನ ಪರಂಪರೆಯಾಗಲಿ, ಪಾಶ್ಚಿಮಾತ್ಯ ವಿಜ್ಞಾನ ಪರಂಪರೆಯಾಗಲಿ ಶುದ್ಧಾಂಗವಾಗಿ ಕಣ್ಣಿಗೆ ಕಾಣಿಸುವ ಪರಿಸರವನ್ನು ಮಾತ್ರ ಪ್ರಾಯೋಗಿಕ ನೆಲೆಯಲ್ಲಿ ನೋಡುತ್ತದೆಂಬುದು ನಿಜ. ಇದು ವಿಜ್ಞಾನಕ್ಕಿರುವ ವಿಸ್ತರಣೆಯೂ ಹೌದು; ಮಿತಿಯೂ ಹೌದು. ನಾವು ವಿಜ್ಞಾನವನ್ನು ಅಧ್ಯಾತ್ಮಕ್ಕೆ ಎದುರಾಗಿ ನಿಲ್ಲಿಸುವ ಅಗತ್ಯವಿಲ್ಲ. ಹಾಗೆ ನೋಡಿದರೆ, ಅಧ್ಯಾತ್ಮ ಮತ್ತು ವಿಜ್ಞಾನ ಒಂದಕ್ಕೊಂದು ಅವಲಂಬನವನ್ನು ಹೊಂದಿದೆಯೆಂದೇ ತಿಳಿಯಬೇಕು. ಹಿರಿಯರಾದ ಡಾ.ಡಿ.ವಿ.ಜಿ. ಅವರು 'ಹಳೆಬೇರು ಹೊಸಚಿಗುರು ಕೂಡಿರಲು ಮರಸೊಬಗು' ಹೀಗೆಂದು ರೂಪಕೋಕ್ತಿಯ ನೆಲೆಯಲ್ಲಿ ನುಡಿದಿದ್ದಾರೆ. ಮರವು ಸೊಬಗಾಗಿ ಕಾಣಲು ಹೊಸಚಿಗುರು ಅನಿವಾರ್ಯವಷ್ಟೆ. ಆದರೆ, ಹೊಸಚಿಗುರಿಗೆ ಧಾತುವನ್ನು ಒದಗಿಸುವುದು ಬೇರು ತಾನೇ? ಇಲ್ಲಿ ಬೇರು ಎಷ್ಟು ಮುಖ್ಯವೋ ಕಾಂಡ, ಕೊಂಬೆ, ಟಿಸಿಲುಗಳು ಅಷ್ಟೇ ಮುಖ್ಯ. ಅದೇ ರೀತಿ ವಿಜ್ಞಾನವು ಬೇರಾದರೆ; ಅಧ್ಯಾತ್ಮವು ಹೂ, ಹಣ್ಣು, ಚಿಗುರು. ಈ ರೂಪಕದ ಭಾಷೆಯನ್ನು ಅರ್ಥಮಾಡಿಕೊಂಡರೆ ವಿಜ್ಞಾನದ ತಳಹದಿ ನಮಗೆ ಮನವರಿಕೆಯಾಗುತ್ತದೆ. ಆಗ ಅಧ್ಯಾತ್ಮವು ನಮ್ಮ ಒಳ ಅರಿವಿಗೆ ಬಂದು ನಿಲ್ಲುತ್ತದೆ. ಈಗ ವಿಜ್ಞಾನವು ಕೇವಲ ಲೋಕಜ್ಞಾನವಾಗಿ ಮಾತ್ರ ನಮ್ಮ ತಿಳಿವಳಿಕೆಯ ಭಾಗವಾಗಿದೆ. ಗ್ರೀಕ್ ದೇಶದ ವಿಜ್ಞಾನಿಗಳು ಭೌತಪ್ರಪಂಚವನ್ನು ಗಮನಿಸುತ್ತಲೇ ಅಭೌತದ ನೆಲೆಯನ್ನು ನಿರುಕಿಸಲು ಪ್ರಯತ್ನಿಸುತ್ತಿದ್ದರು.  ಭಾರತೀಯ ವಿಜ್ಞಾನ ಪ್ರಪಂಚವು ಈ ಮಾತಿಗೆ ಅಪವಾದವಲ್ಲ. ಮನಶಾಸ್ತ್ರ, ಆಯುರ್ವೇದ, ರಸವಾದ, ಜಲ, ಭೂಮಿ, ವಾಯುಶಾಸ್ತ್ರ ಮುಂತಾದ ಭಾರತೀಯ ವಿವಿಧ ಜ್ಞಾನಶಾಖೆಗಳು ಅಧ್ಯಾತ್ಮದ ಬೆಳಕಲ್ಲಿ ಬೆಳಗಿದುದನ್ನು ನಾವು ಸರಿಯಾಗಿ ಕಾಣಬೇಕಾಗಿದೆ.

ಅಧ್ಯಾತ್ಮವು ವಿಜ್ಞಾನದ ಕೈಯನ್ನು ಹಿಡಿದು ನಡೆಯಬೇಕು. ಕೇವಲ ವಿಜ್ಞಾನ ವಿಜೃಂಭಿಸಿದರೆ ಅದು ಲೋಕಕ್ಕೆ ಕೇಡು. ಈ ದೃಷ್ಟಿಯಿಂದ ನೋಡಿದರೆ 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ' ಎಂಬ ವಚನಕ್ಕೆ ಇನ್ನೊಂದು ಬಗೆಯ ಧ್ವನಿ ಪೂರ್ಣವಾದ ಅರ್ಥಸಂಯೋಜನೆ ಇಲ್ಲಿರುವಂತೆ ತೋರುತ್ತದೆ. ಅಧ್ಯಾತ್ಮ ಮತ್ತು ವಿಜ್ಞಾನ ಪರಸ್ಪರ ವಿರೋಧವೆಂದು ನಾವು ಭಾವಿಸಿದರೆ ಅದು ಅಜ್ಞಾನದ ಕೇಡೇ ಸರಿ. ವಿಜ್ಞಾನ ಕ್ಷೇತ್ರದಲ್ಲಿರುವ ವಿಜ್ಞಾನಿಗಳು ಈ ವಿಚಾರವನ್ನು ಆಂಶಿಕವಾಗಿ ಒಪ್ಪಿರುವಂತೆ ತೋರುತ್ತದೆ. ಹಾಗೇ ನೋಡಿದರೆ, ಶುದ್ಧ ವಿಜ್ಞಾನ ಎಂಬುದು ಅರೆಸತ್ಯವೇ ಹೌದು. ಪ್ರತಿಯೊಂದು ವಿಜ್ಞಾನದ ಶಾಖೆಗಳಲ್ಲೂ ಪರಸ್ಪರ ಸಂಬಂಧಗಳುಂಟು. ಪೃಥ್ವಿಯ ಸಂಬಂಧದಲ್ಲಿ ಜಲವಿರುವಂತೆ ಶಾಖವಿರುವಂತೆ, ವಿಜ್ಞಾನದ ಅಂತಃಸಂಬಂಧದಲ್ಲಿ ಅಧ್ಯಾತ್ಮ ಉಂಟು. ಅಧ್ಯಾತ್ಮ ಎಂಬ ಮಾತಿಗೆ ಅರಿವು ಎಂದು ಅರ್ಥ ತಾನೇ? ಅಲ್ಲಮಪ್ರಭುಗಳು 'ತನ್ನ ತಾನರಿದಡೆ ತನ್ನರಿವೆ ಗುರು' ಎಂದು ಒಂದೆಡೆ ಹೇಳಿದ್ದಾರೆ. ಆತನೇ ಇನ್ನೊಂದು ಕಡೆ 'ಅರಿವು ಸಾಮಾನ್ಯವೇ?' ಎಂದು ಪ್ರಶ್ನಿಸಿದ್ದುಂಟು. ಗೀತೆಯಲ್ಲಿ 'ಕಿಮ್ ಅಧ್ಯಾತ್ಮಂ' ಎಂದು ಪ್ರಶ್ನಿಸಿ ಅದಕ್ಕೆ ಉತ್ತರವಾಗಿ ಶ್ರೀಕೃಷ್ಣನು 'ಸ್ವಭಾವೋ ಅಧ್ಯಾತ್ಮಂ' ಎಂದು ನುಡಿದಿದ್ದಾನೆ. ಅಧ್ಯಾತ್ಮವು ಒಳಅರಿವಿನ ಲೋಕವನ್ನು ಅನ್ವೇಷಿಸುತ್ತದೆ. ಇದು ಅಂತಃಚಕ್ಷುವಿಗೆ ಸಂಬಂಧಿಸಿದ್ದೇ ಹೊರತು; ಬಾಹ್ಯ ಚಕ್ಷುವಿಗೆ ಸಂಬಂಧಿಸಿದ್ದಲ್ಲ. ನಾವು ಹೊರಗಿನ ಪಡಿಪದಾರ್ಥಗಳನ್ನೇ ಸುಖದ ತುತ್ತತುದಿಯೆಂದು ಭಾವಿಸಿಬಿಟ್ಟಿದ್ದೇವೆ. ಆದರೆ, ಇದಕ್ಕಿಂತ ಭಿನ್ನವಾದ ಮನೋಲೋಕವೊಂದು ಉಂಟು. ಈ ಲೋಕದ ಸೂಕ್ಷ್ಮತೆಗಳನ್ನು ಆಧುನಿಕ ಜೀವನಶೈಲಿ ವ್ಯಾಪಾರೀಕರಣಗೊಳಿಸಿಬಿಟ್ಟಿದೆ. ನಾವು ಕೊಳ್ಳುಬಾಕ ಸಂಸ್ಕೃತಿಗೆ ತಲೆಬಾಗಿದಂತೆಲ್ಲಾ ನಮ್ಮೊಳಗಿನ ಅರಿವು ಬರಿದಾಗತೊಡಗಿದೆ. ನಾವು ಈಗ ಬಾಹ್ಯಸುಖದ ಒತ್ತಡಕ್ಕೆ ಒಳಗಾಗಿದ್ದೇವೆ. ಹೀಗಾಗಿ, ಈ ಒತ್ತಡದಿಂದ ಹೊರಬರುವುದು ಅನಿವಾರ್ಯವಾಗಿದೆ.

ಈ ಚಿಂತನೆಯ ಬೆಳಕಲ್ಲಿ ಅರಿವು ಮತ್ತು ಇರವು ಸಹಸಂಬಂಧಿಗಳೆಂದೇ ತಿಳಿಯಬೇಕು. ಇರವಿನ ಜ್ಞಾನವಿಲ್ಲದೆ ಅರಿವಿನ ಪ್ರಪಂಚವಿಲ್ಲ. ಈ ಅರ್ಥದಲ್ಲಿಯೇ ಅಲ್ಲಮಪ್ರಭು 'ಅರಿವು ಸಾಮಾನ್ಯವೆ?' ಎಂದು ಹೇಳಿರುವಂತೆ ತೋರುತ್ತದೆ. ನಮಗೆ ಇರವಿನ ಪ್ರಪಂಚವೇ ಕೊನೆಯೆಂದು ತಿಳಿದುಬಿಟ್ಟಿದ್ದೇವೆ. ಅದು ಅರಿವಿನ ಲೋಕಕ್ಕೆ 'ರಹದಾರಿ' ಎಂಬ ಸಂಗತಿಯನ್ನು ಮರೆತಿದ್ದೇವೆ. ಇರವು ವಿಜ್ಞಾನವಾದರೆ; ಅರಿವು ಅಧ್ಯಾತ್ಮ. ಇವೆರಡರ ಸಹಸಂಬಂಧದಲ್ಲಿ ಲೋಕಕ್ಷೇಮದ ನೆಲೆಯಿದೆಯೆಂದು ನಾವು ತಿಳಿಯಬೇಕಾಗಿದೆ. 'ಅರಿತರೆ ಮಾನವ; ಮರೆತರೆ ದಾನವ' ಎಂಬ ಪ್ರಸಿದ್ಧ ನಾಡುನುಡಿಯನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ವಚನಗಳಲ್ಲಿ ಅನೇಕ ಕಡೆ 'ಅರಿವಿನೊಳಗಿನ ಅರಿವು', 'ಬೆಳಗಿನೊಳಗಣ ಬೆಳಗು' ಎಂಬ ಮಾತುಗಳು ಬಂದಿವೆ. ಇವು ಕೇವಲ ಅನುಭಾವಿಕ ನುಡಿಗಳೆಂದು ನಾವು ಪಕ್ಕಕ್ಕೆ ಸರಿಸುವಂತಿಲ್ಲ. ಇವುಗಳ ಹಿಂದಿರುವ ನೂರಾರುವರ್ಷದ ಋತಚಿಂತನೆಯನ್ನು ನಮ್ರತೆ ಹಾಗೂ ವಿವೇಕದಿಂದ ಪರಿಶೀಲಿಸಬೇಕಾಗಿದೆ. ಅದು ಇಂದಿನ ಸಂದರ್ಭದಲ್ಲಿ ತುಂಬಾ ಅಗತ್ಯವೆಂದು ತೋರುತ್ತದೆ.

■ ಪುರಂಜೀವಿ

## ಮಾತೇ ಮುತ್ತು

★ ಧೈರ್ಯವೆಂದರೆ ಎದ್ದು ನಿಂತು ಮಾತನಾಡುವುದು ಮಾತ್ರವಲ್ಲ, ಕೆಲವೊಮ್ಮೆ ಸುಮ್ಮನೇ ಕುಳಿತು ಕೇಳಿಸಿಕೊಳ್ಳುವುದು ಕೂಡ.

—ಲೋಕೋಕ್ತಿ

★ ಮಗು ನಿಮ್ಮ ಹೊಟ್ಟೆ ಇದ್ದಂತೆ. ಅದು ಬಯಸ್ಸಿದ್ದೆಲ್ಲವನ್ನೂ ಕೊಡಬೇಡಿ

—ಫ್ರಾಂಕ್ ಕ್ಲಾರ್ಕ್

★ ಕನ್ನಡವು ಕನ್ನಡವ ಕನ್ನಡಿಸುವಂತಿರಬೇಕು.

—ದ.ರಾ.ಬೇಂದ್ರೆ

★ ವಿಶ್ವಾಸವೊಂದು ನಮ್ಮ ಜತೆಗಿದ್ದರೆ ಯಾವುದಕ್ಕೂ ಯಾರಿಗೂ ಹೆದರಬೇಕಾಗಿಲ್ಲ. ಆತ್ಮವಿಶ್ವಾಸದೆದುರು ನಿಲ್ಲಲು ಭಯಕ್ಕೂ ಭಯ.

—ಹಿತನುಡಿ

★ ಹೊಸದನ್ನು ತಿಳಿಯಬೇಕೆಂಬ ಆಸಕ್ತಿ ನಿಮ್ಮಲ್ಲಿದ್ದರೆ, ಇಡೀ ಲೋಕವೇ ನಿಮಗೆ ನಮಿಸುತ್ತದೆ.

—ಇಂಗರ್ ಸಾಲ್

★ ಅಹಂಕಾರಿ ಮನುಷ್ಯ ಒಂಟಿಯಾಗಿರಬೇಕಾಗುತ್ತದೆ.

—ಚೆನ್ನವೀರ ಕಣವಿ

★ ಸತ್ಯಕ್ಕಾಗಿ ಯಾವುದನ್ನಾದರೂ ತ್ಯಾಗ ಮಾಡಿ, ಸತ್ಯವನ್ನು ಮಾತ್ರ ತ್ಯಾಗ ಮಾಡಬೇಡಿ

—ಸ್ವಾಮಿವಿವೇಕಾನಂದ

★ ಬದುಕೊಂದು ಪ್ರಯಾಣವೇ ಹೊರತು ಅದುವೇ ಅಂತಿಮ ಗುರಿಯಲ್ಲ

—ಮದರ್ ತೆರೇಸಾ